ವಾರದ ಪತ್ರ

## ಸ್ತುತ್ಯರ್ಹ ಕಾಯಕ

ಕಲರ್ಸ್ ಕನ್ನಡದ 'ನನ್ನಮ್ಮ ಸೂಪರ್ ಸ್ಟಾರ್' ರಿಯಾಲಿಟಿ ಶೋನ ಇತ್ತೀಚಿನ ಪ್ರದರ್ಶನದ ಕೊನೆಯಲ್ಲಿ ವೀಕ್ಷಕರಿಗೆ ಒಂದು ಅಚ್ಚರಿ ಕಾದಿತ್ತು. ಬೆಂಗಳೂರಿನ ಲಗ್ಗೆರೆಯಲ್ಲಿರುವ ಆಸರೆ ಫೌಂಡೇಶನ್ ವೃದ್ಧಾಶ್ರಮದ ನಾಲ್ವರು ಮಹಿಳೆಯರನ್ನು ವೇದಿಕೆಗೆ ಬರಮಾಡಿಕೊಂಡು ಸನ್ಮಾನಿಸಿದರು. ಆ ನಾಲ್ವರೂ ಅನಾಥರಲ್ಲ, ಮಕ್ಕಳಿದ್ದಾರೆ. ಇವರನ್ನು ಮಕ್ಕಳು ಮನೆಯಿಂದ ಹೊರತಳ್ಳಿದ್ದಾರೆ. ಹಸಿವಿನಿಂದ ಅಲೆಯುತ್ತಿದ್ದ ಅವರಿಗೆ 'ಆಸರೆ' ಸಂಸ್ಥೆಯ ಜಯರಾಮ ನಾಯ್ಡು, ಮಂಜುಳಾ ದಂಪತಿ ನೆಲೆಯನ್ನು ಒದಗಿಸಿದ್ದಾರೆ.

ಅವರ ಸಂಕಷ್ಟದ ಕಥೆ ಕೇಳಿ ವೀಕ್ಷಕರ ಕಂಗಳು ಕಣ್ಣೀರ ಕೊಳಗಳಾಗಿದ್ದವು. ಸ್ಪರ್ಧೆಯ ಪುಟಾಣಿಗಳು ತಾವು ಸಂಪಾದಿಸಿದ್ದ ಹಣವನ್ನೆಲ್ಲ ಅವರ ಮಡಿಲಲ್ಲಿರಿಸಿ ಕಾಲಿಗೆಬಿದ್ದರು. ಅನಾಥಾಶ್ರಮ, ದೀನ–ದಲಿತರ ಜೀವನ ಕುರಿತು ಜಾಗೃತಿ ಮೂಡಿಸುವುದು ಸ್ತುತ್ಯರ್ಹ.

—ಕೆ. ಲೀಲಾ ಶ್ರೀನಿವಾಸ್, ಹರಪನಹಳ್ಳಿ

## ಮನಮುಟ್ಟುವ ಕಥಾನಕ

ಕನ್ನಡ 'ಚಂದನ'ದ 'ಮನೆ ಮನೆ ಕತೆ'ಯ ಸಂಚಿಕೆಯಲ್ಲಿ ಅನನ್ಯಾ ಕಾಸರವಳ್ಳಿ ಅವರ ಹಲವು ಚಿತ್ರಗಳು ಪ್ರಸಾರವಾಗುತ್ತಿವೆ. 'ಗತಿ', 'ಮುಪ್ಪು', 'ಬಹುಮಾನ' ಕತೆಗಳು ಈಗ ಪ್ರಸಾರವಾಗಿವೆ.

'ಗತಿ' ಲಂಬಾಣಿ ಬುಡಕಟ್ಟು ಸಮುದಾಯದ ಹೆಣ್ಣು ಮಕ್ಕಳು ಎದುರಿಸುತ್ತಿರುವ ಕೌಟುಂಬಿಕ ಸಮಸ್ಯೆಗಳ ನೈಜ ಚಿತ್ರಣವನ್ನು ಕೊಡುತ್ತದೆ. ಚಿತ್ರದಲ್ಲಿ ಉತ್ತರ ಕರ್ನಾಟಕದಲ್ಲಿ ಆಡುವ ಕನ್ನಡ ಭಾಷೆಯನ್ನು ಬಹಳ ಪರಿಣಾಮಕಾರಿಯಾಗಿ ಬಳಸಿದ್ದಾರೆ. ಆ ಸಮುದಾಯದ ಹಾಡು, ವೇಷಭೂಷಣ, ಪ್ರದೇಶಗಳನ್ನು ನೈಜವಾಗಿ ಬಳಸಿಕೊಂಡಿದ್ದಾರೆ. ಇದರಿಂದ ಕತೆ ಹೇಳಬೇಕಾದುದನ್ನು ಹೇಳಿ, ಮನಮುಟ್ಟುವಂತೆ ಮಾಡುತ್ತದೆ.

—ಕೆ.ಪಿ. ರಾಮಗುಂಡಿ, ಬೈಲಹೊಂಗ

### ಎಂತಹ ಕ್ರೌರ್ಯ

ಮಗಳ ಪ್ರಾಣವನ್ನು ಉಳಿಸಲು ತನ್ನ ಪ್ರಾಣವನ್ನೇ ಪಣಕ್ಕಿಟ್ಟು ಹೋರಾಡಿದ ತಂದೆಗೆ ಚೂರಿ ಹಾಕುವ ಮಗಳು. ಬಾವಾಜಿ ಬಾವಾಜಿ ಎಂದು ಕರೆಯುತ್ತಾ ಬಾವನ ಬೆನ್ನಿಗೆ ಚೂರಿ ಹಾಕಿದ ಬಾವ–ಬಾಮೈದುನ. ಇವರಿಬ್ಬರನ್ನೂ ಪ್ರೋತ್ಸಾಹಿಸುವ ಭಾನುಮತಿ.

ಅಬ್ಬಾ ಎಂತಹ ಕ್ರೌರ್ಯ. ಪ್ರಖ್ಯಾತ ನಾಟಕಕಾರ ಷೇಕ್ಸ್‌ಪಿಯರ್ ಬದುಕಿದ್ದಿದ್ದರೆ ಜೂಲಿಯಸ್ ಸೀಜರ್ ನಾಟಕ ಬರೆಯಲು ಕಲರ್ಸ್‌ನ 'ಗೀತಾ' ಧಾರಾವಾಹಿ ತಂಡದ ಸಲಹೆಯನ್ನು ಖಂಡಿತ ಕೇಳುತ್ತಿದ್ದರು ಎಂದೆನಿಸುತ್ತದೆ. ಕ್ರೌರ್ಯಕ್ಕೂ ಒಂದು ಮಿತಿಯಿದೆ, ಹಾಗೆಯೇ ವೀಕ್ಷಕರ ಸಹನೆಗೂ.

—ಸಿ.ಆರ್. ಶ್ರೀನಿವಾಸ, ಬೆಂಗಳೂರು

## ವೇಗ ತೀವ್ರಗೊಳ್ಳಲಿ

ಕಲರ್ಸ್ ಕನ್ನಡದ 'ಲಕ್ಷಣ' ಆಮೆಗತಿಯಲ್ಲಿ ಸಾಗುವ ಮಾಮೂಲಿ ಧಾರಾವಾಹಿ ಸಾಲಿಗೆ ಸೇರುತ್ತಿದೆ. ಅಪರೂಪಕ್ಕೆ ಒಂದು ಡೈಲಾಗ್ ಬಂದ ನಂತರ ಎಲ್ಲಾ ಪಾತ್ರಧಾರಿಗಳ ಮುಖವನ್ನು ತೋರಿಸಿದ ನಂತರ ಇನ್ನೊಂದು ಡೈಲಾಗ್! ಅಷ್ಟರ ಒಳಗೆ ಪ್ರೇಕ್ಷಕರ ತಾಳ್ಮೆ ಕೆಟ್ಟು ಹಣ್ಣಾಗಿ ಹೋಗುವ ಪ್ರಸಂಗ. ಇನ್ನಾದರೂ ಪಾತ್ರಧಾರಿಗಳ ಮುಖವನ್ನು ಎಡಬಿಡದೇ ತೋರಿಸುವುದನ್ನು ನಿಲ್ಲಿಸಲಿ.

—ಬೀರಣ್ಣ ನಾಯಕ ಮೊಗಟಾ, ಯಲ್ಲಾಪುರ

## 'ಮಂಗಳಗೌರಿ...' ದಾರಿಯಲ್ಲಿ 'ಕನ್ನಡತಿ'

ಭುವಿ–ಹರ್ಷ ಸಪ್ತಪದಿ ತುಳಿಯುತ್ತಾರೆ. ಅಮ್ಮಮ್ಮ ಕ್ಯಾನ್ಸರ್‌ನಿಂದ ಗುಣಮುಖ ಆಗುತ್ತಾಳೆ. ಇಲ್ಲವೆ ಭುವಿ–ಹರ್ಷ ಮದುವೆ ನೋಡಿ ನೆಮ್ಮದಿಯಿಂದ ಇಹಲೋಕ ತ್ಯಜಿಸುತ್ತಾಳೆ. ಸಾನಿಯಾಳ ಮುಖವಾಡ ಕಿತ್ತು ಬೀಳುತ್ತದೆ. ವರೂಧಿನಿ ಖಿನ್ನತೆಯ ಮಾತ್ರೆಗಳಿಗೆ ಶರಣಾಗುತ್ತಾಳೆ ಎಂದೆಲ್ಲಾ ಗೋಪುರ ಕಟ್ಟಿದವರಿಗೆ ಶಾಕ್ ಆಗಿದೆ. ಇನ್ನೇನು ಅಕ್ಷತೆಗೆ ರೆಡಿಯಾಗಬೇಕು ಎನ್ನುವಾಗ ಅಜ್ಜಿ, ವರೂಧಿನಿ ಮತ್ತು ಸಾನಿಯಾ ಅಡ್ಡಗಾಲು ಹಾಕುತ್ತಿದ್ದಾರೆ. ಕನ್ನಡತಿಯ ಮದುವೆ 'ಮಂಗಳ ಗೌರಿ ಮದುವೆ'ಯ ದಾರಿ ಹಿಡಿದಿದೆಯೇ ಎನ್ನುವ ಅನುಮಾನ ಬರುತ್ತಿದೆ.

—ರಮಾನಂದ ಶರ್ಮಾ, ನವದೆಹಲಿ

## ಎಲ್ಲೆ ಮೀರಿದ ಕನ್ನಡತಿ

ಕಲರ್ಸ್ ಕನ್ನಡದ 'ಕನ್ನಡತಿ' ನಿಜಕ್ಕೂ ಎಲ್ಲೆ ಮೀರುವ ಹಾಗಿದೆ. ಮಂಗಳಮ್ಮನ ಪಾತ್ರದ ಸಂಭಾಷಣೆ ನೋಡಿದರೆ ಅಂತಹವರನ್ನು ವಾಸ್ತವದಲ್ಲಿ ಕಾಣಲು ಸಾಧ್ಯ ಇಲ್ಲ. ದಯವಿಟ್ಟು ಧಾರಾವಾಹಿಯನ್ನು ಹೆಚ್ಚು ಎಳೆಯಬೇಡಿ, ಸರಿ ದಾರಿಗೆ ತನ್ನಿ. ಒಂದು ದಿನ ಯಾರಿಗೂ ಮಾತಾಡುವ ಅವಕಾಶ ಕೊಡದೆ ಬರಿ ಮಂಗಳಮ್ಮನಿಗೆ ಕೊಟ್ಟಿದ್ದು ಆಭಾಸ ಎನಿಸಿತು. ಗಂಡಿನವರು ಬಂದಾಗ ಮಂಗಳಮ್ಮ ಎದುರುಗೊಳ್ಳುವುದು ಆಕೆಯ ಮಾತಿಗೇ ತದ್ವಿರುದ್ಧ ಆಗಿದೆ.

—ನಾಡಿಗ್ ರಾಮಚಂದ್ರ, ಬೆಂಗಳೂರು

## ಅನ್ಯರ ಮನೆಯಲ್ಲಿ ಹುಡುಕಾಟ ಎಷ್ಟು ಸರಿ?

ಕಲರ್ಸ್‌ನ 'ಕನ್ನಡತಿ'ಯಲ್ಲಿ ಹೆಣ್ಣು ಕೇಳಲು ಬಂದಿದ್ದಾರೆ. ಅವರ ಮಾತು ಕೇಳಿಸಿಕೊಳ್ಳಬೇಕು ಅನ್ನೋಬುದ್ಧಿ ಬೇಡ್ವಾ? ಭುವಿ ಮನೆಗೆ ಬಂದವರನ್ನು ಮಾತನಾಡಿಸುವುದನ್ನು ಬಿಟ್ಟು ಅಜ್ಜಿಗೆ ಹೇಳಲು ಒಳಗೆ ಹೋದಳು. ವೈರಿನೇ ಬಂದರೂ ಬನ್ನಿ ಕುಳಿತುಕೊಳ್ಳಿ ಅನ್ನೊ ಸಂಸ್ಕಾರ ಇರಬೇಕು.

ಅಜ್ಜಿಯ ಓವರ್ ಆ್ಯಕ್ಟಿಂಗ್, ವರೂ ನಡವಳಿಕೆ ಯಾಕೊ ಅತೀ ಆಯಿತು ಅನಿಸುತ್ತಿದೆ. ಅಮ್ಮಮ್ಮ ಹರ್ಷಗೆ ಅವಮಾನ ಮಾಡುತ್ತಿದ್ದಾರೆ. ವಯಸ್ಸಿಗೆ ತಕ್ಕಹಾಗೆ ನಡೆದುಕೊಳ್ಳಬೇಕು. ಯಾಕೊ ಭುವಿಯ ಅತೀ ವಿನಯ ಇಷ್ಟ ಆಗಲಿಲ್ಲ. ವರೂ, ಭುವಿ ಮನೆಗೆ ಬಂದು ಬೈಯೋದು ಸರಿ ಕಾಣುತ್ತಿಲ್ಲ. ಆಕೆ ಭುವಿ ಮನೆಯನ್ನು ಚೆಕ್ ಮಾಡಿದ್ದು ಅಸಹ್ಯ ಅನಿಸುತ್ತದೆ.

—ಮೇಘನಾ ರಘುನಂದನ್ ಹೂವಿನಹಡಗಲಿ

## ಟೀವಿಯಲ್ಲಿ ಗಯ್ಯಾಳಿಯರ ಹವಾ!

ಟೀವಿ ಧಾರಾವಾಹಿಗಳಲ್ಲಿ ನಾಯಕ–ನಾಯಕಿಯರು ಮೆರೆದಾಡುವುದು, ವಿಲನ್‌ಗಳು ಆರ್ಭಟಿಸುವುದು, ತಾಯಂದಿರು, ಅಕ್ಕ–ತಂಗಿಯರು ಕಣ್ಣೀರು ಹರಿಸುವುದು, ದಾಯಾದಿಗಳು ಆಸ್ತಿಗಾಗಿ ಜಗ್ಗಾಡುವುದು, ಕಾರ್ಪೊರೇಟ್ ಕುಟುಂಬಗಳಲ್ಲಿ ಕಂಪನಿ ಹತೋಟಿಗಾಗಿ ಬಡಿದಾಡುವುದು ತೀರಾ ಸಾಮಾನ್ಯ. ಈ ಪಟ್ಟಿಗೆ ಗಯ್ಯಾಳಿಗಳ ಪ್ರವೇಶವೂ ಆಗಿದೆ. ವೀಕ್ಷಕರಿಗೆ ಭರಪೂರ ಮನರಂಜನೆ ದೊರಕುತ್ತಿದೆ. ಮನೆಮಂದಿಯೆಲ್ಲ ಕುಳಿತು ನೋಡಬಹುದಾದ ಧಾರಾವಾಹಿ ಎನಿಸಿಕೊಂಡಿದ್ದ 'ಕನ್ನಡತಿ'ಯಲ್ಲಿ ಅಜ್ಜಿ ಪಾತ್ರ, 'ದೊರೆಸಾನಿ'ಯಲ್ಲಿ ಸತ್ಯವತಿ ಪಾತ್ರ ಗಯ್ಯಾಳಿತನ ಮೆರೆಸುತ್ತಿವೆ. ಇವರು ಗಯ್ಯಾಳಿ ಪಾತ್ರಕ್ಕೆ ನ್ಯಾಯ ಒದಗಿಸಿದ್ದು ಸತ್ಯವಾದರೂ, ಅವರು ಮಹಿಳಾ ವೀಕ್ಷಕರನ್ನು ಮುಜುಗರಕ್ಕೀಡು ಮಾಡುತ್ತಿದ್ದಾರೆ. ಎಷ್ಟೋ ಮನೆಯಲ್ಲಿ ಮಹಿಳೆಯರು ದನಿ ಏರಿಸಿದರೆ 'ಸತ್ಯವತಿ ಆಗಬೇಡ' ಎಂದು ರೇಗಿಸುತ್ತಾರಂತೆ.

—ರಮಾನಂದ

## ಪೊಲೀಸ್‌ಗೆ ಎಷ್ಟು ರಜೆ?

ಕಲರ್ಸ್ ಕನ್ನಡದಲ್ಲಿ ಬರುತ್ತಿರುವ 'ಮಂಗಳಗೌರಿ ಮದುವೆ'ಯಲ್ಲಿ ಪೊಲೀಸ್ ಅಧಿಕಾರಿ ಸಾಮಾನ್ಯನಂತೆ ತನ್ನ ಹೆಂಡತಿಯನ್ನು ಹುಡುಕುವುದು, ಆಕೆ ಎದುರಿಗೆ ಇದ್ದರೂ ಗುರುತಿಸದಿರುವುದು ಎಂಥ ವಿಪರ್ಯಾಸ! ಪೊಲೀಸ್ ಅಧಿಕಾರಿ ಎಷ್ಟು ದಿನ ರಜೆ ಹಾಕಬಹುದು? ಕತೆಯನ್ನಾದರೂ ಬದಲಿಸಿ, ಇಲ್ಲವೇ ಲಕ್ಷಣವಾಗಿ ಮಂಗಳಗೌರಿಯ ಕಥೆಯನ್ನು ಮುಗಿಸಿ.

—ಎಂ.ಟಿ. ರಮಾನಂದ ರೆಡ್ಡಿ, ಮದಕರಿಪುರ